# ಸ್ವಾಮಿ ಹರಿಪ್ರೇಮಾನಂದ (೧೮೯೫-೧೯೭೧) ಮತ್ತು ಸ್ವಾಮಿ ಮಹೇಶ್ವರಾನಂದ (೧೮೯೦-೧೯೭೩)

ಮೂಲ ಬಂಗಾಳಿ: ಸ್ವಾಮಿ ಚೇತನಾನಂದ

ಅನುವಾದ: ಕುಮಾರಿ ಪಿ. ಉಷಾ

ಶ್ರೀಮಾತೆಯಯ ಶಿಷ್ಯರಾದ ಹರಿಪ್ರೇಮಾನಂದರು ಯಾವಾಗಲೂ ಶ್ರೀಮಾತೆಯವರ ಮನೆಯ ಮಾಳಿಗೆಯನ್ನು ಬರಿಗಾಲಿನಲ್ಲಿ ಹತ್ತಿ-ಇಳಿಯುತ್ತಿರುವುದನ್ನು ನೋಡುತ್ತಿದ್ದೆ. ಅವರ ಕಣ್ಣುಗಳು ಕೆಂಪಾಗಿರುತ್ತಿದ್ದವು. ಅವರಿಗೆ ಅಧಿಕ ರಕ್ತ ದೊತ್ತಡವಿರುತ್ತಿತ್ತು. ವೃದ್ಧ ಸಾಧುಗಳಾಗಿದ್ದ ಅವರು ನೋಡಲು ಚಿಕ್ಕ ಬಾಲಕನಂತಿದ್ದರು.

ನಂತರ ೧೯೫೯ರಲ್ಲಿ ಕಾಶಿಯ ಅದ್ವೈತಾಶ್ರಮದಲ್ಲಿ ಅವರನ್ನು ಭೇಟಿಯಾಗಿದ್ದೆ. ಮೊದಲು ಹೋಗುತ್ತಲೆ ಹರಿಪ್ರೇಮಾನಂದರು ನನಗೆ ಹೇಳಿದರು, ''ನೋಡು, ನೀನು ಎಲ್ಲಿಗೆ ಹೋದರೂ ಎರಡು ವಿಷಯಗಳನ್ನು ತಿಳಿದುಕೊಳ್ಳಬೇಕು - ಬಾತ್‌ರೂಮ್ ಎಲ್ಲಿದೆ, ಹಾಗೂ ನೀರು ಸಿಗುವ ಸ್ಥಳ ಎಲ್ಲಿ ಎಂದು. ಆರೋಗ್ಯ ಚೆನ್ನಾಗಿರದಿದ್ದರೆ ನಿನಗೆ ಜಪಧ್ಯಾನಗಳನ್ನು ಮಾಡಲಾಗುವುದಿಲ್ಲ. ಆದ್ದರಿಂದ ಬಾತ್‌ರೂಮ್ ಎಲ್ಲಿದೆಯೆಂದು ತಿಳಿದಿರಬೇಕು. ಹಾಗೆಯೆ ಬಾಯಾರಿಕೆ ನೀಗಿಸಿಕೊಳ್ಳಲು ನೀರಿನ ಮಡಕೆ ಎಲ್ಲಿದೆಯೆಂಬುದನ್ನು ತಿಳಿದುಕೊ.'' ಈ ವಯಸ್ಕ ಸಾಧುಗಳ ವ್ಯವಹಾರ ಜ್ಞಾನವನ್ನು ಕಂಡು ಮುಗ್ಧನಾದೆ.

ಕಾಶಿಯಲ್ಲಿ ಹರಿಪ್ರೇಮಾನಂದರು ನನ್ನ ಮಾರ್ಗದರ್ಶಕರಾಗಿದ್ದರು. ಮೊದಲ ದಿನ ಕಾಶಿ ವಿಶ್ವನಾಥನ ದರ್ಶನಕ್ಕಾಗಿ ನನ್ನನ್ನು ಕರೆದುಕೊಂಡು ಹೋದರು. ಅವರು ನನ್ನ ಕೈ ಹಿಡಿದು ಗರ್ಭಗುಡಿಯ ಬಲಗಡೆ ಇದ್ದ ಬಿಳಿ ಕಲ್ಲಿನ ಮೇಲೆ ನನ್ನನ್ನು ಕೂರಿಸಿ ಹೇಳಿದರು, ''ನೋಡು, ನೀನು ಕೆಲವೇ ಕ್ಷಣಗಳಲ್ಲಿ ದರ್ಶನ ಮಾಡಿದ ವಿಶ್ವನಾಥನನ್ನು ಈಗ ಕಣ್ಣುಮುಚ್ಚಿ ಧ್ಯಾನಿಸು.'' ಅವರು ಹೇಳಿದಂತೆ ವಿಶ್ವನಾಥನನ್ನು ಭಾವಿಸತೊಡಗಿದೆ. ಅವರು ತಮ್ಮ ಕಣ್ಣುಗಳನ್ನು ಮುಚ್ಚಿ ತಮ್ಮ ಕೈಯನ್ನು ಉತ್ತರೀಯದಿಂದ ಮರೆಸಿ ಜಪ ಮಾಡಲಾರಂಭಿಸಿದರು. ೧೫-೨೦ ನಿಮಿಷಗಳ ಬಳಿಕ ಕಣ್ತೆರೆದು ಹೇಳಿದರು, ''ಯಾವುದೇ ದೇವ-ದೇವಿಯರ ಮಂದಿರಕ್ಕೆ ಹೋದಾಗ, ದರ್ಶನದ ಬಳಿಕವೇ ಅಲ್ಲಿಂದ ಹೊರಗೆ ಹೋಗಿಬಿಡಬೇಡ. ಮಂದಿರದ ಮೆಟ್ಟಿಲಿನ ಮೇಲೆ ಅಥವಾ ಯಾವುದೇ ಮೂಲೆಯಲ್ಲಿ ಕುಳಿತು ಕೆಲವು ಕ್ಷಣ ಧ್ಯಾನ-ಜಪವನ್ನು ಮಾಡಿ ನಂತರವೇ ಅಲ್ಲಿಂದ ಹೊರಗೆ ಹೋಗು.'' ಅವರ ಈ ಉಪದೇಶವು ಇಂದಿಗೂ ನನ್ನ ಮನದಲ್ಲಿ ಉಳಿದಿವೆ.

ಹರಿಪ್ರೇಮ ಮಹಾರಾಜರು ಶ್ರೀಮಾತೆ ಹಾಗೂ ರಾಧುವನ್ನು ಕರೆದುಕೊಂಡು ಬಂಕುರಾಗೆ ಹೋಗಿದ್ದರೆಂದು ನಂತರದ ಕಾಲದಲ್ಲಿ ತಿಳಿಯಿತು. ಶ್ರೀಮಾತೆಯವರ ಶಿಷ್ಯರಾದ ಮಹೇಶ್ವರಾನಂದಜಿ (ವೈಕುಂಠ ಮಹಾರಾಜರು) ಅಲ್ಲಿನ ವೈದ್ಯರಾಗಿದ್ದರು. ಅಸ್ವಸ್ಥಳಾಗಿದ್ದ ರಾಧುವನ್ನು ಕರೆದುಕೊಂಡು ಶ್ರೀಮಾತೆಯವರು ಅಲ್ಲಿಗೆ ಹೋಗಿದ್ದರು. ನಂತರ ಒಂದು ದಿನ ಸಾಯಂಕಾಲ ಹರಿಪ್ರೇಮಾನಂದರು ಶ್ರೀಮಾತೆಯವರ ಕಾಲಿಗೆ ವಾತದ ಎಣ್ಣೆಯನ್ನುಜ್ಜುತ್ತಿದ್ದಾಗ, ಆಕೆಯಲ್ಲಿ ಜಗದ್ಧಾತ್ರೀ ದೇವಿಯ ರೂಪವನ್ನು ಕಂಡಿದ್ದರು. ೧೯೭೧ರಲ್ಲಿ ಅವರು ತಮ್ಮ ೭೬ನೆಯ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದರು.



ಸ್ವಾಮಿ ಮಹೇಶ್ವರಾನಂದ

ಸ್ವಾಮಿ ಮಹೇಶ್ವರಾನಂದಜಿಯವರನ್ನು ಕಲ್ಕತ್ತದ ಅದ್ವೈತ ಆಶ್ರಮದಲ್ಲಿ ನೋಡಿದ್ದೆನಾದರೂ ಅವರೊಡನೆ ಎಂದೂ ಮಾತುಕತೆ ನಡೆಸಿದ್ದಿಲ್ಲ. ಅವರ ಬಗ್ಗೆ ಎರಡು ಕತೆಗಳನ್ನು ಕೇಳಿದ್ದೆ. ಶ್ರೀಮಾತೆಯವರು ಆಗ ಕೋಯಲ್‌ಪಾರದಲ್ಲಿ ಆಮಶಂಕೆಯಿಂದ ಪೀಡಿತರಾಗಿದ್ದಾಗ, ವೈಕುಂಠ ಮಹಾರಾಜರು ಅವರ ಚಿಕಿತ್ಸೆಯನ್ನು ಮಾಡಲು ಬಂದರು. ಅವರು ಅಲೋಪಥಿ ಡಾಕ್ಟರ್ ಆಗಿದ್ದರೂ ಹೋಮಿಯೋಪಥಿ ಚಿಕಿತ್ಸೆ ನೀಡುತ್ತಿದ್ದರು. ಅವರು ಶ್ರೀಮಾತೆಯವರ ನಾಲಗೆಯ ಮೇಲೆ ಒಂದು ಬಿಂದು ಹೋಮಿಯೋಪಥಿ ಔಷಧಿಯನ್ನು ಹಾಕಲು ಹೋದಾಗ ಅವರಿಗೆ ದೇವೀಮೂರ್ತಿಯ ದರ್ಶನವಾಗಿತ್ತು. ಅವರು ಅವಾಕ್ಕಾಗಿ ನಿಂತುಬಿಟ್ಟಾಗ ಶ್ರೀಮಾತೆಯವರು ''ಏ ವೈಕುಂಠ, ನನಗೆ ಔಷಧಿಯನ್ನು ಕೊಡು'' ಎಂದು ನೆನಪಿಸಿದರು. ಮಹಾರಾಜರಿಗೆ ಏನೂ ತೋಚದಾಯಿತು. ನಂತರ ಔಷಧಿಯ ಸೀಸೆಯಿಂದ ಒಂದು ಬಿಂದುವನ್ನು ಸಕ್ಕರೆಗೆ ಸೇರಿಸಿ ಶ್ರೀಮಾತೆಯವರಿಗೆ ಸೇವಿಸಲು ಹೇಳಿದರು.

ಮತ್ತೊಂದು ವಿಷಯವನ್ನು ಕೇಳಿದ್ದೆ. ಶ್ರೀಮಾತೆಯವರ ಮಹಾಸಮಾಧಿಯ ಬಳಿಕ ಅವರು ಮೆರವಣಿಗೆಯಲ್ಲಿ ಬಾಗ್‌ಬಜಾರಿನಿಂದ ವರಾಹನಗರದ ಕುಟಿಘಾಟಿನವರೆಗೆ, ಶ್ರೀಮಾತೆಯವರ ಮುಖದ ಮೇಲೆ ಬಿಸಿಲು ಬೀಳದಂತೆ ಛತ್ರಿಯನ್ನು ಹಿಡಿದು ನಡೆದಿದ್ದರು. ಈ ಸಾಧುಗಳು ಧನ್ಯಜೀವನವನ್ನು ನಡೆಸಿದವರು. ಶ್ರೀಮಾತೆಯವರ ಕೃಪೆಗೆ ಪಾತ್ರರಾದ ಅವರು ಮಾನವ ಸೇವೆಗಾಗಿ ತಮ್ಮ ಜೀವನವನ್ನು ಸವೆಸಿದರು. ೮೩ ವರ್ಷ ವಯಸ್ಸಿನ ಅವರು ೧೯೭೩ರಲ್ಲಿ ಕಾಶಿಯ ಸೇವಾಶ್ರಮದಲ್ಲಿ ಮಹಾಸಮಾಧಿಯನ್ನು ಹೊಂದಿದರು. ❖